**ದಿನಾಂಕ:05-02-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರಃ ಎಂ.ಡಿ. ವಕೀಲರಿಂದಃ**

ನಾನು 10 ನೇ ತರಗತಿವರೆಗೆಓದಿರುತ್ತೇನೆ. ನನಗೆ ಕನ್ನಡ ಇಂಗ್ಲಿಷ್ ಓದಲು ಬರುತ್ತದೆ. ದಾವೆಯನ್ನು ಸಲ್ಲಿಸಲು ನಾನೇ ಮಾಹಿತಿಯನ್ನು ಕೊಟ್ಟಿದ್ದೆ. 1 ನೇ ಪ್ರತಿವಾದಿಯು ನನ್ನ ತಂದೆಯ ಕಡೆಯಿಂದ ಸಂಬಂಧಿಕರಾಗಿರುತ್ತಾರೆ ಮತ್ತು ನಮ್ಮ ಪಕ್ಕದ ಜಮೀನಿನವರಾಗಿರುತ್ತಾರೆ. 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಅಣ್ಣ. 3 ನೇ ಪ್ರತಿವಾದಿಯು ಪಕ್ಕದ ಜಮೀನಿನವರು, ನಮ್ಮ ಸಂಬಂಧಿಕರಲ್ಲ. ದಾವಾಸ್ವತ್ತು ನಮ್ಮ ತಂದೆಗೆ ದರಖಾಸ್ತಿನಲ್ಲಿ ಮಂಜೂರಾಗಿರುತ್ತದೆ. ನಮ್ಮ ತಂದೆಗೆ 4 ಎಕರೆ 19 ಗುಂಟೆ ಜಮೀನು ಮಂಜೂರಾಗಿತ್ತು. 4 ಎಕರೆ 19 ಗುಂಟೆ ಜಮೀನಿನಲ್ಲಿ ಯಾರು ಯಾರು ಸ್ವಾಧೀನದಲ್ಲಿದ್ದಾರೆ ಎಂದು ಹೇಳಬಹುದು. 4 ಎಕರೆ 19 ಗುಂಟೆ ಜಮೀನಿನ ಪೈಕಿ ನಾನು 1 ಎಕರೆ 3 ಗುಂಟೆ ಜಮೀನಿನಲ್ಲಿ, ಬಿ.ಎನ್. ಮಲ್ಲಿಕಾರ್ಜುನ ಎನ್ನುವವರು 1 ಎಕರೆ 3 ಗುಂಟೆ ಜಮೀನಿನಲ್ಲಿ, ಉಮೇಶ್ ಎನ್ನುವವರು 1 ಎಕರೆ 3 ಗುಂಟೆ ಜಮೀನಿನಲ್ಲಿ, 1 ನೇ ಪ್ರತಿವಾದಿಯು 15 ಗುಂಟೆ ಜಮೀನಿನಲ್ಲಿ, 2 ನೇ ಪ್ರತಿವಾದಿಯು 15 ಗುಂಟೆ ಜಮೀನಿನಲ್ಲಿ, 3 ನೇ ಪ್ರತಿವಾದಿಯು 20 ಗುಂಟೆ ಜಮೀನಿನಲ್ಲಿ ಸ್ವಾಧೀನ ಇರುತ್ತಾರೆ. ಪ್ರತಿವಾದಿಗಳನ್ನು ಹೊರತುಪಡಿಸಿ, ಸ್ವಾಧೀನದಲ್ಲಿರುವ ಬೇರೆ ವ್ಯಕ್ತಿಗಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ಸ್ವಾಧೀನದಲ್ಲಿರುವ ಬೇರೆಯವರನ್ನೂ ಸಹಾ ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇಲ್ಲ. ಸ.ನಂ.7 ರ ಜಮೀನಿನ ಹದ್ದುಬಸ್ತು ಆಗಿರುವುದಿಲ್ಲ. ಹದ್ದುಬಸ್ತು ಮಾಡಲು ಸರ್ವೇ ಕಛೇರಿಗೆ ಅರ್ಜಿ ಕೊಟ್ಟಾಗ ಹದ್ದುಬಸ್ತು ಆಗಿಲ್ಲ ಎನ್ನುವುದು ಗೊತ್ತಾಗಿರುತ್ತದೆ. ಹದ್ದುಬಸ್ತು ಮಾಡಲು ಅರ್ಜಿ ಕೊಟ್ಟ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ದಾವೆಯ ಬಿ ಶೆಡ್ಯೂಲ್ ಸ್ವತ್ತನ್ನು ಪ್ರತಿವಾದಿಗಳು ಅತಿಕ್ರಮ ಮಾಡಿದ್ದಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಮಂಜೂರು ಆದಾಗಿನಿಂದ ಆರ್.ಟಿ.ಸಿ.ಯಲ್ಲಿ ನಮೂದಿಸಿರುವ ವ್ಯಕ್ತಿಗಳೇ ಅವರವರಿಗೆ ಮಂಜೂರಾದ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ತಂದೆಗೆ ಮಂಜೂರಾದ 4 ಎಕರೆ 19 ಗುಂಟೆ ಜಮೀನಿನ ಪೂರ್ವಕ್ಕೆ ತೀರ್ಥಮಲ್ಲಪ್ಪರವರ ಜಮೀನು, ಪಶ್ಚಿಮಕ್ಕೆ ಉಮೇಶ್ ರವರ ಜಮೀನು, ಉತ್ತರಕ್ಕೆ ಶಿವಪ್ಪರವರ ಜಮೀನು, ದಕ್ಷಿಣಕ್ಕೆ ಮಲ್ಲಿಕಾರ್ಜುನ ರವರ ಜಮೀನು ಇರುತ್ತವೆ. ನಾನು ಸ್ವಾಧೀನದಲ್ಲಿರುವ ಸ್ವತ್ತಿನ ಪೂರ್ವಕ್ಕೆ ತೀರ್ಥಮಲ್ಲಪ್ಪರವರ ಜಮೀನು, ಪಶ್ಚಿಮಕ್ಕೆ ಉಮೇಶ್ ರವರ ಜಮೀನು, ಉತ್ತರಕ್ಕೆ ಶಿವಪ್ಪರವರ ಜಮೀನು, ದಕ್ಷಿಣಕ್ಕೆ ಮಲ್ಲಿಕಾರ್ಜುನ ರವರ ಜಮೀನು

ಇರುತ್ತವೆ. 1 ನೇ ಪ್ರತಿವಾದಿಯು ಸ್ವಾಧೀನದಲ್ಲಿರುವ ಸ್ವತ್ತಿನ ಪೂರ್ವಕ್ಕೆ ತೀರ್ಥಮಲ್ಲಪ್ಪರವರ ಜಮೀನು, ಪಶ್ಚಿಮಕ್ಕೆ ಮಲ್ಲಿಕಾರ್ಜುನರವರ ಜಮೀನು, ಉತ್ತರಕ್ಕೆ ಮರಳುಸಿದ್ಧಪ್ಪರವರ ಜಮೀನು, ದಕ್ಷಿಣಕ್ಕೆ ಹಾಲಪ್ಪನವರ ಜಮೀನು ಇರುತ್ತವೆ. 2 ನೇ ಪ್ರತಿವಾದಿಯು ಸ್ವಾಧೀನದಲ್ಲಿರುವ ಸ್ವತ್ತಿನ ಪೂರ್ವಕ್ಕೆ ಶಿವಪ್ಪನವರ ಜಮೀನು, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಕೆರೆ, ದಕ್ಷಿಣಕ್ಕೆ ಉಮೇಶ್ ರವರ ಜಮೀನು ಇರುತ್ತವೆ. 1 ನೇ ಪ್ರತಿವಾದಿಯು ಸ್ವಾಧೀನದಲ್ಲಿರುವ ಸ್ವತ್ತಿನ ಪೂರ್ವಕ್ಕೆ ಬಸಪ್ಪನವರ ಜಮೀನು, ಪಶ್ಚಿಮಕ್ಕೆ ಕೆರೆ, ಉತ್ತರಕ್ಕೆ ಗಾಲ್ಫ್ ಆಟದ ಮೈದಾನ, ದಕ್ಷಿಣಕ್ಕೆ ಶಿವಪ್ಪರವರ ಜಮೀನು ಇರುತ್ತವೆ. ಈ ಮೇಲಿನ ಚೆಕ್ಕುಬಂದಿಗಳ ಮಧ್ಯದಲ್ಲಿರುವ ಸ್ವತ್ತಿನಲ್ಲಿ ಪ್ರತಿವಾದಿಗಳು ತುಂಬಾ ವರ್ಷಗಳಿಂದ ಸ್ವಾಧೀನದಲ್ಲಿದ್ದಾರೆ ಮತ್ತು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ಗಾಲ್ಫ್ ಕ್ಲಬ್ ಸುತ್ತಮುತ್ತ ಇರುವ ಸ್ವತ್ತುಗಳಿಗೆ ಹೆಚ್ಚು ಬೆಲೆ ಇರುತ್ತದೆ ಎಂದರೆ ಸರಿ. ಹೆಚ್ಚು ಬೆಲೆ ಇರುವ ಸ್ವತ್ತನ್ನು ಪ್ರತಿವಾದಿಗಳಿಂದ ಪಡೆಯಬೇಕು ಎಂಬ ಉದ್ದೇಶದಿಂದ ಈ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

ನನ್ನ ಜಮೀನಿನಲ್ಲಿ ತರಕಾರಿ ಬೆಳೆಯುತ್ತೇನೆ, ಈಗ ಅಡಿಕೆ ಗಿಡಗಳನ್ನು ನೆಟ್ಟಿರುತ್ತೇನೆ, ಅಡಿಕೆ ಗಿಡಗಳು 6 ವರ್ಷದ ವಯಸ್ಸಿನ ಗಿಡಗಳಾಗಿರುತ್ತವೆ. 3 ನೇ ಪ್ರತಿವಾದಿಯು ಸ್ವಾಧೀನದಲ್ಲಿರುವ ಸ್ವತ್ತಿನಲ್ಲಿ ಸುಮಾರು 10 ವರ್ಷ ವಯಸ್ಸಿನ ಅಡಿಕೆ ಮರಗಳು ಇರುತ್ತವೆ. ಪ್ರತಿವಾದಿಗಳು ನಮ್ಮ ಜಮೀನನ್ನು ಒತ್ತುವರಿ ಮಾಡಿಲ್ಲ, ಅನಗತ್ಯವಾಗಿ ಅವರ ವಿರುದ್ಧ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಹದ್ದುಬಸ್ತು ಮಾಡಿಕೊಳ್ಳಲು ನಾನು ಯಾವುದೇ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

**2 ಮತ್ತು 3 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ, ಚಿಕ್ಕಮಗಳೂರು.